ವಿಜ್ಞಾನ ಪ್ರಯೋಗಾಲಯ

ಎರಡು ಹೀರುಕೊಳವೆ ಮೂಲಕ (ಸ್ಟ್ರಾದಲ್ಲಿ) ಕುಡಿಯುವುದು

- ಒಂದು ಗಾಜಿನ ಲೋಟದಲ್ಲಿರುವ ನೀರನ್ನು ಎಷ್ಟು ಸಾಧ್ಯವೋ ಅಷ್ಟು ಬೇಗನೆ ಖಾಲಿ ಮಾಡಲು ಒಂದು ಹೀರುಕೊಳವೆ ಬಳಸಿ (ಎ) ಕುಡಿಯಿರಿ.
- ಮತ್ತೊಮ್ಮೆ ಗಾಜಿನ ಲೋಟವನ್ನು ಅಷ್ಟೇ ನೀರಿನಿಂದ ತುಂಬಿ. ಎರಡು ಹೀರುಕೊಳವೆಗಳೊಂದಿಗೆ ಪ್ರಯೋಗವನ್ನು ಪುನರಾವರ್ತಿಸಿ. ಎರಡೂ ಕೊಳವೆಗಳ ಒಂದು ತುದಿಯನ್ನು ನಿಮ್ಮ ಬಾಯಿಯಲ್ಲಿರಿಸಿ. ಆದರೆ, ಒಂದು ಹೀರುಕೊಳವೆಯ ಇನ್ನೊಂದು ತುದಿಯು ನೀರಿನೊಳಗೆ ಮತ್ತು ಇನ್ನೊಂದು ಹೀರುಕೊಳವೆಯ ತುದಿ ಲೋಟದ ಹೊರಗೆ ಇರುವಂತೆ ನೋಡಿಕೊಳ್ಳಿ (ಬಿ).

ಎರಡರಲ್ಲಿ ಯಾವ ಲೋಟ ಬೇಗನೆ ಖಾಲಿಯಾಗುತ್ತದೆ?

1.ಎ) ಪ್ರಯೋಗದಲ್ಲಿರುವ ಲೋಟ

2.ಬಿ) ಪ್ರಯೋಗದಲ್ಲಿರುವ ಲೋಟ

3.ಎರಡೂ ಏಕಕಾಲದಲ್ಲಿ ಖಾಲಿಯಾಗುತ್ತವೆ

ಕೊಡುಗೆ: ಜಿ ಎಸ್. ರೌಟೇಲಾ, ಇವರು ಮುಂಬಯಿಯ ರಾಷ್ಟ್ರೀಯ ವಿಜ್ಞಾನ ಸಂಗ್ರಹಾಲಯ ಪರಿಷತ್ತಿನ ಮಾಜಿ ಮಹಾನಿರ್ದೇಶಕರು, ನೆಹರು ವಿಜ್ಞಾನ ಕೇಂದ್ರದ ನಿರ್ದೇಶಕರು, ಕೊಲ್ಕೊತಾದ ವಿಜ್ಞಾನ ನಗರಿಯ ನಿರ್ದೇಶಕರು ಮತ್ತು ಆಂತ್ರಪಾಲಜಿಕಲ್ ಸರ್ವೇ ಆಫ್ ಇಂಡಿಯಾದ ನಿರ್ದೇಶಕರಾಗಿದ್ದಾರೆ (ಪ್ರಭಾರಿ). ಅವರನ್ನು gsr.rautela@gmail.com ಮೂಲಕ ಸಂಪರ್ಕಿಸಬಹುದು.